ದಿನಾಂಕ 03–10–2016 ರಂದು ಮದ್ಯಾಹ್ನ 3.00 ಗಂಟೆಗೆ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್ | ಸದಸ್ಯರು |
| 3. | ಡಾ. ಎಂ. ಶೇಖರಗೌಡ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ | ಸದಸ್ಯರು |
| 5. | ಡಾ. ಎ. ನಾಗನಗೌಡ | ಸದಸ್ಯರು |
| 6. | ಶ್ರೀ ಕೆ. ಮುರಳೀಧರ | ಸದಸ್ಯರು |
| 7. | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಂಟನೇಯ ಸಭೆಗೆ ಸರ್ವಸದಸ್ಯರನ್ನು ಹಾಗೂ ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರಾದ ಡಾ. ಎಂ. ಶೇಖರಗೌಡ ಮತ್ತು ಶ್ರೀಮತಿ ಹೇಮಾವತಿ ಲಂಕೇಶ ಅವರುಗಳನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| 1 | **ದಿನಾಂಕ 24–5–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಯ ಹಾಗೂ ದಿನಾಂಕ 14–7–2016 ರ ಸರ್ಕುಲೇಶನ್ ಅಜೆಂಡಾದ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 24–5–2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಯ ಹಾಗೂ ದಿನಾಂಕ 14–7–2016 ರ ಸರ್ಕುಲೇಶನ್ ಅಜೆಂಡಾದ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು<br>**(ಕ್ರಮ: ಕುಲಸಚಿವರು)** |
| 2 | **ದಿನಾಂಕ 24–5–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಯ ಹಾಗೂ ದಿನಾಂಕ 14–7–2016 ರ ಸರ್ಕುಲೇಶನ್ ಅಜೆಂಡಾದ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 24–5–2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಯ ಹಾಗೂ ದಿನಾಂಕ 14–7–2016 ರ ಸರ್ಕುಲೇಶನ್ ಅಜೆಂಡಾದ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ: ಕುಲಸಚಿವರು)** |
| 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2015–16 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ವಿಶ್ವವಿದ್ಯಾಲಯದ ಪ್ರಮುಖ ಸಾಧನೆಗಳನ್ನು ವಾರ್ಷಿಕ ವರದಿಯಲ್ಲಿ ಸೇರಿಸುವ ಹಾಗೂ ಪ್ರಮುಖ ಕಾರ್ಯಕ್ರಮಗಳಾದ ಇ-ಸ್ಯಾಪ್, ಕೃಷಿ ಅಭಿಯಾನ ಇತ್ಯಾದಿ ಕಾರ್ಯಕ್ರಮಗಳನ್ನು ಕೇವಲ ತಖ್ತೆಗಳಲ್ಲಿ ಪ್ರಸ್ತುತಪಡಿಸುವ ಬದಲಾಗಿ ಅವುಗಳ ವಿವರಗಳನ್ನು ನೀಡುವ ಸಲಹೆಯೊಂದಿಗೆ ಘನ ವೇದಿಕೆಯು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ 2015–16 ನೇ ಸಾಲಿನ ವಾರ್ಷಿಕ ವರದಿಗೆ ಅನುಮೋದನೆ ನೀಡಿತು. ವಾರ್ಷಿಕ ವರದಿಯು ಸಾರ್ವಜನಿಕವಾಗಿ ಉಪಯೋಗಿಸುತ್ತಿರುವುದರಿಂದ ಸಿಬ್ಬಂದಿಯವರ ಪರಿಪೂರ್ಣ ವಿವರಗಳನ್ನು ಒದಗಿಸಲು ಸಹ ತಿಳಿಸಲಾಯಿತು. **(ಕ್ರಮ : ಶಿಕ್ಷಣ ನಿರ್ದೇಶಕರು)** |

| | |
|---|---|
| 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮುಖ್ಯ ಆವರಣದಲ್ಲಿ ನೆಟ್‌ವರ್ಕಿಂಗ್, ಸರ್ವೆಲೆನ್ಸ್ ಮತ್ತು ವೈ-ಫೈ ಸೊಲ್ಯುಶನ್ಸ್ ಸೌಲಭ್ಯಗಳನ್ನು ಸ್ಥಾಪಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುತ್ತಾ ಕಿಯೋನಿಕ್ಸ್ ರವರು ಪ್ರಸ್ತಾಪಿಸಿದ ದರ ಹಾಗೂ ಕಾರ್ಯವು ಸಮಂಜಸವಾಗಿರುವ ಬಗ್ಗೆ ಒಬ್ಬ ಐ.ಟಿ. ಪರಿಣಿತ ಸದಸ್ಯರನ್ನೊಳಗೊಂಡ ಸಮಿತಿಯಿಂದ ದೃಢೀಕರಿಸಲು ಹಾಗೂ 4ಜಿ ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ ಸಹ ದೃಢಪಡಿಸಿಕೊಳ್ಳಲೂ ಸಹ ಸಲಹೆ ನೀಡಿತು. ಕೆ.ಪಿ.ಟಿ.ಸಿ.ಎಲ್. ಮತ್ತು ಎನ್.ಐ.ಸಿ. ಯವರ ಸಹಾಯ ಮತ್ತು ಸಹಕಾರಗಳನ್ನು ಪಡೆಯಲು ಸಲಹೆ ನೀಡಿತು. ಐ.ಟಿ. ಪರಿಣಿತರ ಕನ್ಸಲ್ಟೆನ್ಸಿ ಸೇವೆಯನ್ನು ಗೌರವಧನ ನೀಡುವುದರೊಂದಿಗೆ ಅವಶ್ಯಕತೆಯ ಅನುಸಾರ ಪಡೆಯಲೂ ಸಹ ಸಲಹೆ ನೀಡಿತು. (ಕ್ರಮ: ಕುಲಸಚಿವರು) |
| 5 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು<br>(ಕ್ರಮ : ಸರಕು ಖರೀದಿ ಅಧಿಕಾರಿಗಳು) |
| 6 | **ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಿದ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯು ನಂತರ, ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಮರು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಈ ಕುರಿತು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು.<br>(ಕ್ರಮ : ಸರಕು ಖರೀದಿ ಅಧಿಕಾರಿಗಳು / ಸಂಶೋಧನಾ ನಿರ್ದೇಶಕರು) |
| 7 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿದ್ಯಾ ವಿಷಯಕ ಪರಿಷತ್ತು ಒಪ್ಪಿಗೆ ನೀಡಿದ ವಿವಿಧ ಐಟಂಗಳಿಗೆ ಅನುಮೋದನೆ ಕುರಿತು** |
| 7.1 | **ಬಿ.ಎಸ್.ಸಿ.(ಕೃಷಿ) ಮತ್ತು ಬಿ.ಟೆಕ್.(ಕೃಷಿ ತಾಂತ್ರಿಕ) ಸ್ನಾತಕ ಪದವಿ ಕಾರ್ಯಕ್ರಮಗಳಿಗಾಗಿ 5ನೇ ಡೀನ್ಸ್ ಕಮಿಟಿಯು ಶಿಫಾರಸ್ಸು ಮಾಡಿದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಕುರಿತು**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪವಾಗಿ ಅನುಸರಿಸುತ್ತಿರುವಂತೆ ಹಾಗೂ ಪ್ರಾಂತೀಯ ಅವಶ್ಯಕತೆಗಳನ್ನಾಧರಿಸಿ ವಿವಿಧ ವಿಷಯಗಳ ಕ್ರೆಡಿಟ್ ಹವರ್‌ಗಳನ್ನು ಅಂತಿಮಗೊಳಿಸುವಾಗ 5ನೇ ಡೀನ್ಸ್ ಕಮಿಟಿಯ ಪ್ರಸ್ತಾವನೆಯ ಶೇಕಡ 20 ರಷ್ಟು ವಿವೇಚನೆಗನುಗುಣವಾಗಿ ಅನುಮತಿಸಿರುವ ವಿಷಯಾಂತರ ಇರುವುದನ್ನು ಪರಿಗಣಿಸಿ ಅದಕ್ಕೆ ಅನುಮೋದನೆ ನೀಡಲಾಯಿತು. (ಕ್ರಮ: ಕುಲಸಚಿವರು) |
| 7.2 | **ಶೈಕ್ಷಣಿಕ ನಿಯಮಾವಳಿಗಳ ಕ್ರಮ.ಸಂ. 10 ವಿದ್ಯಾರ್ಥಿಗಳ ಮೌಲ್ಯಮಾಪನ ಕ್ಕೆ ತಿದ್ದುಪಡಿ – ಶುಲ್ಕವನ್ನು ಹೆಚ್ಚಿಸುವ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃವಿವಿ ಧಾರವಾಡದಲ್ಲಿಯೂ ಸಹ ಇದೇ ರೀತಿ ಶುಲ್ಕ ಹೆಚ್ಚಳ ಮಾಡಿರುವುದರಿಂದ ಘನ ವೇದಿಕೆಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು. (ಕ್ರಮ: ಕುಲಸಚಿವರು) |

| | |
|---|---|
| 7.3 | **ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನ ಶಿಕ್ಷಕ ಸಿಬ್ಬಂದಿ ಹಾಗೂ ವಿಭಾಗಗಳನ್ನು ಪುನರ್-ರಚಿಸುವ ಕುರಿತು**<br><br>**ಠರಾವು:**<br><br>ವಿವರವಾದ ಚರ್ಚೆಯ ನಂತರ, ಪ್ರತಿಯೊಂದು ವಿಭಾಗಕ್ಕೆ ಸಿಬ್ಬಂದಿಯವರ ಸಂಖ್ಯೆ ಇರುವಂತೆ ಐ.ಸಿ.ಎ.ಆರ್. ನಿಯಮಾವಳಿಗಳನುಸಾರ ಸಿಬ್ಬಂದಿಯವರ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಸಲ್ಲಿಸುವ ಸಲಹೆಯೊಂದಿಗೆ ಘನ ವೇದಿಕೆಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು.<br><br>**(ಕ್ರಮ: ಕುಲಸಚಿವರು)** |
| 8 | **ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2016–'17 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರತಿನಿಯೋಜನೆ ಸೌಲಭ್ಯವನ್ನು ನೀಡುವ ಕುರಿತು.**<br><br>**ಠರಾವು:**<br><br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು ಹಾಗೂ ಕಾರ್ಯನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯಲ್ಲಿ ಕೃವಿವಿ ರಾಯಚೂರಿನಲ್ಲಿ ಅಧ್ಯಯನಕ್ಕಾಗಿ 2016–'17 ನೇ ಸಾಲಿನಲ್ಲಿ ಅನುಕ್ರಮವಾಗಿ 10 ಶಿಕ್ಷಕರಿಗೆ ಹಾಗೂ "Sandwich" ಅಡಿ ಅಧ್ಯಯನಕ್ಕಾಗಿ ವಿವಿಧ ವಿಶ್ವವಿದ್ಯಾಲಯಗಳಿಗೆ 2015–'16 / 2016–'17 ನೇ ಸಾಲಿನಲ್ಲಿ 1+5 ಶಿಕ್ಷಕರಿಗೆ ನಿಯೋಜಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು.<br>**(ಕ್ರಮ: ಕುಲಸಚಿವರು)** |
| 9 | **ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಸಮ್ಮೇಳನ / ಅಲ್ಪಾವಧಿ ಕೋರ್ಸ್ ಇತ್ಯಾದಿಗಳಲ್ಲಿ ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು**<br><br>**ಠರಾವು:**<br><br>ದೀರ್ಘ ಚರ್ಚೆಯ ನಂತರ, ಹನ್ನೆರಡು ಶಿಕ್ಷಕರು /ವಿಜ್ಞಾನಿಗಳಿಗೆ ರೂ. 1.00 ಲಕ್ಷಗಳ ಧನಸಹಾಯದೊಂದಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿದ್ದನ್ನು ಹಾಗೂ ಏಳು ಶಿಕ್ಷಕರು /ವಿಜ್ಞಾನಿಗಳಿಗೆ ಕೃವಿವಿಗೆ ಆರ್ಥಿಕ ಹೊರೆ ಇಲ್ಲದಂತೆ ಒ.ಒ.ಡಿ. ಆಧಾರದ ಮೇಲೆ ಅಂತರರಾಷ್ಟ್ರೀಯ ಕಾರ್ಯಾಗಾರಗಳಲ್ಲಿ ಪ್ರಬಂಧ ಮಂಡಿಸಲು ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು<br>**(ಕ್ರಮ: ಕುಲಸಚಿವರು)** |
| 10 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ 1-4-2006 ನಂತರದಲ್ಲಿ ಸೇವೆಗೆ ಹಾಜರಾದ ಸಿಬ್ಬಂದಿಯವರಿಗೆ ಈ ಹಿಂದೆ ಸಲ್ಲಿಸಿದ ಸೇವೆಯನ್ನು ಹಳೆಯ ಪಿಂಚಣಿ ಉದ್ದೇಶಕ್ಕಾಗಿ ಪರಿಗಣಿಸುವ ಕುರಿತು.**<br><br>**ಠರಾವು:**<br><br>ದೀರ್ಘ ಚರ್ಚೆಯ ನಂತರ, ಸದರಿ ವಿಷಯವು ಹಣಕಾಸಿನ ಹೊಣೆಗಾರಿಕೆ ಒಳಗೊಂಡಿದ್ದರಿಂದ, ಈ ಕುರಿತು ಕರ್ನಾಟಕ ಸರಕಾರದ ಹಣಕಾಸು ಇಲಾಖೆಯ ಸಹಮತಿ ಪಡೆಯಲು ಘನ ವೇದಿಕೆಯು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು)** |
| 11 | **ಡಾ. ಎಂ.ಕೆ. ನಾಯಕ್, ಪ್ರಾಧ್ಯಾಪಕರವರು ಸಾವಧಿಕ ಅಧಿಕಾರಿಗಳ ಹುದ್ದೆಯನ್ನು ಒಪ್ಪಿಕೊಳ್ಳಲು ಅನುಮತಿ ನೀಡಿದ್ದನ್ನು ಸ್ಥಿರೀಕರಿಸುವ ಕುರಿತು**<br><br>**ಠರಾವು:**<br><br>ಸಂಕ್ಷಿಪ್ತ ಚರ್ಚೆಯ ನಂತರ, ಸದರಿ ವಿಷಯದ ಕುರಿತು ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು<br>**(ಕ್ರಮ: ಕುಲಸಚಿವರು)** |

| | |
|---|---|
| 12 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, 2015–16 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಲೆಕ್ಕಪರಿಶೋಧನೆಗಾಗಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಆರ್.ಕೆ.ವಿ.ವೈ. ಗಾಗಿ ಪ್ರತ್ಯೇಕವಾಗಿ ಲೆಕ್ಕವಿಡಲು ಸಲಹೆ ನೀಡಿತು.<br>**(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)** |
| 13 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಆಸ್ಪತ್ರೆಗೆ ಮಾನ್ಯತೆ ಕೊಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಡೀನ್ (ವಿದ್ಯಾರ್ಥಿ ಕಲ್ಯಾಣ) ಮತ್ತು ವೈದ್ಯಾಧಿಕಾರಿಗಳವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಅಂಗೀಕರಿಸಬಹುದಾದಂತಹ ಆಸ್ಪತ್ರೆಗಳಿಗೆ ಭೇಟಿ ನೀಡಿ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಆಸ್ಪತ್ರೆಗೆ ಮಾನ್ಯತೆ ಕೊಡುವ ಕುರಿತು ತೀರ್ಮಾನಿಸಲು ಘನ ವೇದಿಕೆಯು ಸಲಹೆ ನೀಡಿತು. ಈ ಸಂಬಂಧವಾಗಿ ಡಿ.ಪಿ.ಎ.ಆರ್. ನ ನಿಯಮಾವಳಿಗಳನ್ನು ಹಾಗೂ ಸರಕಾರದ ಅನುಮೋದಿತ ದರಗಳ ವಿವರಗಳನ್ನು ಪಡೆಯಲು ಉಪ–ಕಾರ್ಯದರ್ಶಿಗಳು (ಹಣಕಾಸು) ಅವರು ಸಲಹೆ ನೀಡಿದರು. **(ಕ್ರಮ: ಕುಲಸಚಿವರು)** |
| 14 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ದಿವಂಗತ ಶ್ರೀ ಮಹದೇವರೆಡ್ಡಿ ಅವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಸಂಬಂಧಿಸಿದಂತೆ ಒಟ್ಟು ರೂ. 5,49,838/– (ರೂಪಾಯಿ ಐದು ಲಕ್ಷ ನಲವತ್ತೊಂಭತ್ತು ಸಾವಿರದ ಎಂಟು ನೂರಾ ಮುವತ್ತೆಂಟು ಮಾತ್ರ) ವಿಶೇಷ ಪ್ರಕರಣವೆಂದು ಪರಿಗಣಿಸಿ ಮರುಪಾವತಿಸಲು ಘನ ವೇದಿಕೆಯು ಅನುಮೋದನೆ ನೀಡಿತು ಮತ್ತು ಇದನ್ನೇ ಇನ್ನು ಮುಂದೆ ಇತರರ ಪ್ರಕರಣಗಳಿಗೂ ಸಹ ಪರಿಗಣನೆಗೆ ತೆಗೆದುಕೊಳ್ಳಬಾರದೆಂದು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು)** |
| 15 | **ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಮತ್ತು ತೀರ್ಪುದಾರರಿಗೆ ಹಾಗೂ ತರಬೇತುದಾರರಿಗೆ ಕೊಡುವ ಗೌರವಧನ, ತುಟ್ಟಿಭತ್ಯೆ ಮತ್ತು ಪ್ರಯಾಣ ಭತ್ಯೆ ಹೆಚ್ಚಿಸುವ –ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಮತ್ತು ತೀರ್ಪುದಾರರಿಗೆ ಹಾಗೂ ತರಬೇತುದಾರರಿಗೆ ಕೊಡುವ ಗೌರವಧನ, ತುಟ್ಟಿಭತ್ಯೆ ಮತ್ತು ಪ್ರಯಾಣ ಭತ್ಯೆ ಹೆಚ್ಚಿಸಲು ಪ್ರಸ್ತಾಪಿಸಿದನ್ನು ಡೀನ್ (ವಿದ್ಯಾರ್ಥಿ ಕಲ್ಯಾಣ) ಅವರು ತಿಳಿಸಿದಂತೆ ಹೆಚ್ಚಿಸಿದ ದರಗಳನ್ನು ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಮೀಸಲಿರಿಸಿದ ಅನುದಾನದಿಂದಲೇ ಭರಿಸಲು ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ: ಕುಲಸಚಿವರು/ ಡೀನ್ (ವಿದ್ಯಾರ್ಥಿ ಕಲ್ಯಾಣ))** |
| 16 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾರಂಭಿಸಿದ್ದಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ ರಾಯಚೂರಿನ ಆಡಳಿತ ಭವನದ ಮುಂದುಗಡೆ |

| | |
|---|---|
| | ಹೂದೋಟವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಲು ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಕಾರ್ಯನಿರ್ವಾಹಕ ಅಭಿಯಂತರರು) |
| 17 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ವಹಿಸಿಕೊಡುವ ಕುರಿತು**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು ಹಾಗೂ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯೊಂದಿಗೆ ಒಡಂಬಡಿಕೆಯನ್ನು (MoU) ಮಾಡಿಕೊಂಡು ಒಂದು ವರ್ಷದ ಅವಧಿಗಾಗಿ ವಿಶ್ವವಿದ್ಯಾಲಯವು ಸಲ್ಲಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು 4ಜಿ ಒಳಗೊಂಡಿದೆಯೇ ಎಂಬುದನ್ನು ಅರಿತುಕೊಳ್ಳಲು ಸಲಹೆ ನೀಡಿತು.<br>**(ಕ್ರಮ : ಕುಲಸಚಿವರು/ ಕಾರ್ಯನಿರ್ವಾಹಕ ಅಭಿಯಂತರರು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| 1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ 2016–17 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಅನುಮೊದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ ರಾಯಚೂರಿನಲ್ಲಿ ರೈತರ ಸಹಭಾಗಿತ್ವದಲ್ಲಿ 2016–17 ನೇ ಸಾಲಿಗಾಗಿ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನದ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ))** |
| 2 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ / ಕೃಷಿ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಬಿ4240 ಟ್ರ್ಯಾಕ್ಟರ್ (24 ಹೆಚ್.ಪಿ.) ಫ್ರಂಟ್ ಲೋಡರ್ (ಎಲ್.ಎ.304) ಜೊತೆ ಮತ್ತು ಬ್ಯಾಕ್ ಹೋ (ಬಿ.ಹೆಚ್–65) ಗಳನ್ನು ಖರೀದಿಸಲು ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ಕುಬುಟಾ ಕಂಪನಿಯು ಏಕೈಕ ಒಡೆತನದಾರರು ಎಂಬುವುದನ್ನು ಹಾಗೂ ಇನ್ಟರ್ ಕಲ್ಟಿವೇಷನ್, ಟ್ರೆನ್‌ಚಿಂಗ್ ಮತ್ತು ಹೆವಿ ಲೋಡ್ ಟ್ರಾನ್ಸ್ಪೋರ್ಟ್‌ಗಾಗಿ ಉಪಯೋಗವಾಗುವಂತಹ ವಿಶೇಷತೆಯುಳ್ಳ ಮಿನಿ ಟ್ರ್ಯಾಕ್ಟರ್‌ನ ಏಕೈಕ ಉತ್ಪಾದಕರು ಎಂಬುದನ್ನು ಖಚಿತಪಡಿಸಿಕೊಳ್ಳಲು ಸಲಹೆ ನೀಡಿತು. ಬೀಜ ಕೇಂದ್ರ ಯೋಜನೆಯಡಿ ಮುಖ್ಯ ಕೃಷಿ ಸಂಶೋದನಾ ಕೇಂದ್ರ, ರಾಯಚೂರು, ಕೃ.ವಿ.ಕೇ., ಬೀದರ್ ಮತ್ತು ರದ್ದೆವಾಡಗಿ ಗಳಲ್ಲಿ ಸದರಿ ಯಂತ್ರೋಪಕರಣಗಳನ್ನು ಖರೀದಿಸಲು ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ))** |
| 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಹೂದೋಟ ಕಾಮಗಾರಿಯನ್ನು ಕೈಗೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು. **(ಕಾರ್ಯನಿರ್ವಾಹಕ ಅಭಿಯಂತರರು)** |

| | |
|---|---|
| 4 | ಮಾನ್ಯ ಕುಲಪತಿಗಳು ಹಾಗೂ ಭೇಟಿ ನೀಡುವ ಗಣ್ಯರಿಗಾಗಿ ವಾಹನಗಳನ್ನು ಖರೀದಿಸಲು ಅನುಮೋದನೆ ಕುರಿತು.<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಮಾನ್ಯ ಕುಲಪತಿಗಳವರ ಉಪಯೋಗಕ್ಕಾಗಿ ಒಂದು ಟೊಯೋಟೊ ಇನ್ನೋವಾ ವಾಹನವನ್ನು ಹಾಗೂ ಮೂರು ಕಾರುಗಳನ್ನು (ಹೊಂಡಾ ಸಿಟಿ/ಟೊಯೋಟೊ ಇಟಿಯೋಸ್) ಅಧಿಕಾರಿಗಳವರ ಹಾಗೂ ಭೇಟಿ ನೀಡುವ ಗಣ್ಯ ವ್ಯಕ್ತಿಗಳವರಿಗಾಗಿ ಖರೀದಿಸುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. **(ಕಾರ್ಯನಿರ್ವಾಹಕ ಅಭಿಯಂತರರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು** |
| | ➢ **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013–14 ನೆ ಸಾಲಿನ ಲೆಕ್ಕ ಪರಿಶೋದನಾ ವರದಿಯ ಕಂಡಿಕೆ 32 ರಿಂದ 37 ಕ್ಕೆ ಅನುಸರಣಾ ವರದಿ ಕುರಿತು:**<br><br>ಲೆಕ್ಕ ಪರಿಶೋದನಾ ವರದಿಯ ಕಂಡಿಕೆ 34, 36 ಮತ್ತು 37 ರ ಅನುಸರಣಾ ವರದಿಗೆ ಘನ ವೇದಿಕೆಯು ಅನುಮೋದನೆ ನೀಡಿತು ಅದಾಗ್ಯೂ ಕಂಡಿಕೆ ಸಂಖ್ಯೆ 32 ಮತ್ತು 33 ಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ಪ್ರಾರಂಭಿಸಲು ಘನ ವೇದಿಕೆಯು ಸಲಹೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 5–10–2016 | ಸಹಿ /– 5–10–2016 |
| **(ಪಿ.ಎಂ. ಸಾಲಿಮಠ)** | **(ಡಿ.ಎಂ. ಚಂದರಗಿ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |



**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.